# ಸುದ್ದಿ ಸಂಚಯ

## ಬೆಳಗಾಮ್‌ನಲ್ಲಿ ರಾಮಕೃಷ್ಣ ಮಿಷನ್ ಆಶ್ರಮದ ಉದ್ಘಾಟನೆ

**ಸ್ವಾಮಿ ವಿವೇಕಾನಂದರು** ತಮ್ಮ ಪರಿವ್ರಾಜಕ ದಿನಗಳಲ್ಲಿ ಬೆಳಗಾಂಗೆ ಭೇಟಿಯಿತ್ತು ಅರಣ್ಯಾಧಿಕಾರಿ ಶ್ರೀ ಹರಿಪದಮಿತ್ರರ ಮನೆಯಲ್ಲಿ ೯ ದಿನಗಳು ತಂಗಿದ್ದರು. ಆ ಮನೆ ಮತ್ತು ಅದಕ್ಕೆ ಸಂಬಂಧಪಟ್ಟ ಭೂಮಿಯಿನ್ನು ಕರ್ನಾಟಕ ಸರ್ಕಾರವು ಇತ್ತೀಚೆಗೆ ರಾಮಕೃಷ್ಣ ಮಹಾಸಂಘಕ್ಕೆ ದಾನವಾಗಿ ನೀಡಿತು. ಈಗ ಅಲ್ಲಿ ರಾಮಕೃಷ್ಣ ಮಹಾಸಂಘದ ಒಂದು ಹೊಸ ಕೇಂದ್ರವು ಪ್ರಾರಂಭವಾಗಿದೆ. ಸ್ವಾಮಿ ಪುರುಷೋತ್ತಮಮಾನಂದರು ಅದರ ಅಧ್ಯಕ್ಷರಾಗಿರುವರು.

ಹರಿಪದ ಮಿತ್ರರ ಹಳೆಯ ಮನೆಯು ಈಗ ಜೀರ್ಣೋದ್ಧಾರಗೊಂಡಿದೆ. ಅದರ ಪ್ರಾರಂಭೋತ್ಸವ ಮತ್ತು ಆಶ್ರಮದ ಹೊಸ ಕಟ್ಟಡ ನಿರ್ಮಾಣದ ಶಂಕುಸ್ಥಾಪನೆ ೨೩.೫.೨೦೦೧ರಂದು ರಾಮಕೃಷ್ಣ ಸಂಘದ ಹಲವು ಸ್ವಾಮಿಗಳ ಸಾನ್ನಿಧ್ಯದಲ್ಲಿ ನಡೆಯಿತು. ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸ್ಮರಣಾನಂದರು ಹೊಸಕಟ್ಟಡದ ಶಂಕುಸ್ಥಾಪನೆ ಮಾಡಿದರು. ಕರ್ನಾಟಕ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣ ಅವರು ಜೀರ್ಣೋದ್ಧಾರಗೊಂಡ ಮನೆಯ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಅವರು ಮಾತನಾಡುತ್ತ ದೇಶವು ಸ್ವಾಮಿ ವಿವೇಕಾನಂದರ ತತ್ತ್ವಗಳನ್ನು ಅನುಸರಿಸುವುದಾದರೆ ಮತಾಂಧತೆಯಿಂದ ಪಾರಾಗಬಹುದು, ಎಂದರು. ಅವರು ರಾಮಕೃಷ್ಣ ಸಂಘಕ್ಕೆ ಆರ್ಥಿಕ ನೆರವೂ ಸೇರಿದಂತೆ ಎಲ್ಲ ರೀತಿಯ ನೆರವಿನ ಭರವಸೆಯನ್ನು ನೀಡಿದರು. ಬೆಳಗಾಂ ಲೋಕಸಭಾ ಸದಸ್ಯರಾದ ಶ್ರೀ ಅಮರಸಿನ್ಹ ಪಾಟೀಲರು ತಮ್ಮ ಲೋಕಸಭಾ ಸದಸ್ಯ ನಿಧಿಯಿಂದ ೧೦ ಲಕ್ಷ ರೂಪಾಯಿಗಳನ್ನು ಆಶ್ರಮದ ಅಭಿವೃದ್ಧಿಗಾಗಿ ಬಿಡುಗಡೆ ಮಾಡಿದರು. ಆವಶ್ಯಕವಿದ್ದರೆ ಕರ್ನಾಟಕದ ಇತರ ಲೋಕಸಭಾ ಸದಸ್ಯರೂ ಇದೇ ರೀತಿ ಹಣ ಬಿಡುಗಡೆ ಮಾಡಲು ಕೇಳಿಕೊಳ್ಳುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಭರವಸೆ ನೀಡಿದರು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಲೋಕೋಪಯೋಗಿ ಇಲಾಖೆಯ ಮಂತ್ರಿಗಳಾದ ಶ್ರೀ ಧರಂ ಸಿಂಗ್ ಅವರು ಆಶ್ರಮದ ಪಕ್ಕದ ೩೬ ಗುಂಟೆ ಜಾಗವನ್ನು ಸರ್ಕಾರವು ಆಶ್ರಮಕ್ಕೆ ನೀಡುವುದಾಗಿ ಹೇಳಿದರು.

೧೮೯೭ರಲ್ಲಿ ಕೊಲ್ಕತದಲ್ಲಿ ಒಂದು ಮುರುಕಲು ಮನೆಯಲ್ಲಿ ಪ್ರಾರಂಭವಾದ ರಾಮಕೃಷ್ಣ ಸಂಘವು ಈಗ ವಿಶ್ವಾದ್ಯಂತ ೧೫೦ ಶಾಖೆಗಳನ್ನು ಹೊಂದಿದೆ ಎಂದು ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸ್ಮರಣಾನಂದರು ನುಡಿದರು. "ಹಣ ಮುಖ್ಯವಲ್ಲ. ವ್ಯಕ್ತಿ ಮತ್ತು ದೇಶಗಳಿಗೆ ಹಣ ಆವಶ್ಯಕ ನಿಜ. ಆದರೆ ದೇಶದ ಪ್ರಗತಿಗೆ ಮತ್ತು ಸಮಾಜ ಕಲ್ಯಾಣಕ್ಕಾಗಿ ದುಡಿಯುವ ಸರಿಯಾದ ವ್ಯಕ್ತಿಗಳು ಅತ್ಯವಶ್ಯವಾಗಿ ಬೇಕಾಗಿದ್ದಾರೆ" —ಎಂದು ಅವರು ಕಳಕಳಿಯಿಂದ ನುಡಿದರು.

ಡಾ.ಡಿ.ಎಂ.ನಂಜುಂಡಪ್ಪ, ಶ್ರೀಮತಿ ಸುಧಾಮೂರ್ತಿ ಮುಂತಾದ ಗಣ್ಯ ವ್ಯಕ್ತಿಗಳು ಸಭೆಯಲ್ಲಿ ಉಪಸ್ಥಿತರಿದ್ದರು. ಸ್ವಾಮಿ ಪುರುಷೋತ್ತಮಾನಂದರು ಸಭಿಕರಿಗೆ ಸ್ವಾಗತವನ್ನು ಕೋರಿದರು.

## "ಮೂರನೆ ಸಹಸ್ರಮಾನದಲ್ಲಿ ವೇದಾಂತ" ಅಮೆರಿಕದಲ್ಲಿ ವಿಶೇಷ ಸಮಾವೇಶ

**ಮೇಲಿನ ವಿಷಯವನ್ನು** ಕುರಿತು ಒಂದು ಬೃಹತ್ ಸಮ್ಮೇಳನವನ್ನು ಏರ್ಪಡಿಸಲಾಯಿತು. ಅದು ನಡೆದದ್ದು ಅಮೆರಿಕದ ಮಿಚಿಗನ್ ಪ್ರಾಂತದಲ್ಲಿರುವ ಗ್ಯಾಂಜೀಸ್ ಎಂಬ ಪ್ರಶಾಂತ ವಾತಾವರಣದ ಪ್ರದೇಶದಲ್ಲಿ. ಅಲ್ಲಿ ಚಿಕಾಗೊ ವೇದಾಂತ ಸೊಸೈಟಿಗೆ ಸೇರಿದ ಒಂದು ಸಂನ್ಯಾಸೀ ಮಠವಿದೆ. ಈ ಸಮ್ಮೇಳನವನ್ನು ಏರ್ಪಡಿಸಿದವರು ಕರ್ನಾಟಕದವರಾದ ಮತ್ತು ಈಗ ಚಿಕಾಗೊ ವೇದಾಂತ ಸೊಸೈಟಿಯ ಮುಖ್ಯಸ್ಥರಾಗಿರುವ ಸ್ವಾಮಿ ಚಿದಾನಂದರು. ಈ ಕಾರ್ಯಕ್ರಮ ಜೂನ್ ೨೨ರಿಂದ ೨೪ರವರೆಗೆ ನಡೆಯಿತು. ವಿಶೇಷ ಪೂಜೆ, ಭಕ್ತಿಗೀತೆಗಳು, ಉಪನ್ಯಾಸಗಳು, ವಿಚಾರಗೋಷ್ಠಿ, ಸ್ಲೈಡ್ ಷೋ—ಇವು ಕಾರ್ಯಕ್ರಮದ ವಿಶೇಷ ಆಕರ್ಷಣೆಗಳಾಗಿದ್ದವು. "ಪಶ್ಚಿಮದಲ್ಲಿ ವೇದಾಂತ : ಅಂದು-ಇಂದು-ನಾಳೆ", "ಯಾಂತ್ರಿಕ ಯುಗದಲ್ಲಿ ಸನಾತನ ಮೌಲ್ಯಗಳು", "ವೇದಾಂತ ಮತ್ತು ರಾಮಕೃಷ್ಣ ಮಿಷನ್" —ಇವೇ ಮುಂತಾದ ವಿಷಯಗಳ ಮೇಲೆ ಉಪನ್ಯಾಸಗಳು ನಡೆದವು. ಇದೇ ಸಂದರ್ಭದಲ್ಲಿ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಯುವಕರಿಗೆ ಬಹುಮಾನ ವಿತರಿಸಲಾಯಿತು. ಸಮ್ಮೇಳನದಲ್ಲಿ ಸುಮಾರು ಒಂದು ಸಾವಿರ ಪ್ರತಿನಿಧಿಗಳು ಭಾಗವಹಿಸಿದ್ದರು. ಪ್ರತಿನಿಧಿಗಳಿಗೆ ಹತ್ತಿರದ ಹೋಟೆಲ್‌ಗಳಲ್ಲಿ ವಸತಿವ್ಯವಸ್ಥೆ ಮಾಡಲಾಗಿತ್ತು.

ಚೆನ್ನೈನಲ್ಲಿರುವ ರಾಮಕೃಷ್ಣಮಠದ ಅಧ್ಯಕ್ಷರಾದ ಸ್ವಾಮಿ ಗೌತಮಾನಂದರು ವಿಶೇಷ ಅತಿಥಿಯಾಗಿ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅಮೆರಿಕ ಮತ್ತು ಕೆನಡಾದಿಂದ ಒಟ್ಟು ೧೩ ಜನ ಸ್ವಾಮಿಗಳು ಭಾಗವಹಿಸಿದ್ದರು. ಅವರುಗಳು: ಸ್ವಾಮಿಗಳಾದ ಅಪರಾನಂದ, ಆತ್ಮರೂಪಾನಂದ, ಬ್ರಹ್ಮರೂಪಾನಂದ, ಚೇತನಾನಂದ, ಪ್ರಬುದ್ಧಾನಂದ, ಪ್ರಮಥಾನಂದ, ಪ್ರಪನ್ನಾನಂದ, ಶಾಂತರೂಪಾನಂದ, ಸರ್ವದೇವಾನಂದ, ತಥಾಗತಾನಂದ, ತ್ಯಾಗಾನಂದ, ಚಿದಾನಂದ ಮತ್ತು ವರದಾನಂದ.

ಸಮ್ಮೇಳನದಲ್ಲಿ ಭಾಗವಹಿಸಿದ ೨೬ ವರ್ಷದ ಕಂಪ್ಯೂಟರ್ ತಜ್ಞ, ಜೋ ಜೀವಾ (*Joe Dxiewa*)ಅವರು ಹೇಳುತ್ತಾರೆ: "ಈಗ ಜಗತ್ತಿನಲ್ಲಿ ಆಗುತ್ತಿರುವ ಬದಲಾವಣೆ ಮತ್ತು ಅರಾಜಕತೆಗಳ ನಡುವೆ ವೇದಾಂತವು ಏಕತೆಯನ್ನೂ ಸಮನ್ವಯವನ್ನೂ ಬೋಧಿಸುತ್ತದೆ. ಅದರ ಬೋಧನೆ ದೀರ್ಘಕಾಲಕ್ಕೆ ಅನ್ವಯವಾಗುವಂತಹುದು. ಅದು ನಮ್ಮ ಜೀವನಾವಧಿಯನ್ನು ಮೀರಿ ನೋಡುವ ದೃಷ್ಟಿಕೋನವನ್ನು ನೀಡುತ್ತದೆ."

ಪ್ರಾಟೆಸ್ಟೆಂಟರಾದ ಜಾನೆಟ್ ಪೂಲೆ (*Janet Poole*) ಹೇಳುತ್ತಾರೆ : "ಈ ಜನರಿಂದ (ಸ್ವಾಮಿಗಳಿಂದ) ಪ್ರತಿಯೊಬ್ಬರೂ ಕಲಿಯಬೇಕಾದುದು ಬಹಳಷ್ಟಿದೆ ಎಂದು ನಾನು ನಂಬುತ್ತೇನೆ. ಅವರು ಭಗವದನ್ವೇಷಣೆಗಾಗಿ, ಕ್ರಿಸ್ತನು ಮಾಡಿದಂತೆ, ಮನೆ, ಐಶ್ವರ್ಯ, ಕುಟುಂಬ ಎಲ್ಲವನ್ನೂ ತ್ಯಾಗ ಮಾಡಿರುವರು. ನಾನು ಉತ್ತಮ ಕ್ರೈಸ್ತಳಾಗಲು ಈ ಸಮ್ಮೇಳನ ಸಹಾಯಕವಾಗುತ್ತದೆ." ❑